ತೆತ್ತುಕೊಂಡರೆಂದರೆ, ಆಮೇಲೆ ತಮ್ಮ ಗುರಿಯ ಮೂಲ ಕಾರಣಗಳನ್ನೇ ಮರೆತುಬಿಡುವುದುಂಟು. ಕ್ರಾಂತಿಯ ಆತುರ ಕೂಡ ಅವರನ್ನು ಹಾದಿಯಿಂದ ಅಡ್ಡಹಚ್ಚಿಬಿಡಬಹುದು. ಯಾವುದನ್ನು ತಾವು ಕಲಿತುಕೊಳ್ಳಬೇಕೆನ್ನುತ್ತಾರೋ, ತಮ್ಮ ಜನಕ್ಕೆ ಕಲಿಸಬೇಕೆನ್ನುತ್ತಾರೋ ಅದಕ್ಕೆ ತದ್ವಿರುದ್ಧವಾದ ಹಾದಿ ಹಿಡಿಯುವುದರಲ್ಲೇ ಯಶಸ್ಸು ಸುಲಭವಾಗಿ ಸಿಕ್ಕುತ್ತದೆ ಎಂದು ಅವರಿಗೆ ಭಾಸವಾಗುತ್ತದೆ... ಕ್ರಾಂತಿಕಾರಿಗಳು ಶೀಘ್ರ ಯಶಸ್ಸು ಸಿಕ್ಕುತ್ತದೆಯೆಂದು ಎಂದೂ ಸುಳ್ಳಿನ ಸಾಧನಗಳನ್ನು ಅವಲಂಬಿಸಬಾರದು.'

* * *

1967ರ ಹೊತ್ತಿಗೆ ಲೋಹಿಯಾ ವ್ಯಕ್ತಿತ್ವ ವ್ಯಾಪಕ ಮಟ್ಟದಲ್ಲಿ ಬೆಳೆಯತೊಡಗಿತ್ತು. ಆ ಕಾಲದ ಪ್ರಖ್ಯಾತ ವ್ಯಂಗ್ಯಚಿತ್ರಕಾರ, ರಾಜಕೀಯ ವಿಶ್ಲೇಷಕ ರಾಜಿಂದರ್ ಪುರಿ ಬರೆಯುತ್ತಾರೆ:

'1967ರ ಮಧ್ಯಭಾಗದಲ್ಲೊಮ್ಮೆ ಮಹಾರಾಜ ಕರ್ಣಿ ಸಿಂಗ್ ಕೊಟ್ಟ ಔತಣಕೂಟಕ್ಕೆ ಲೋಹಿಯಾ ಬಂದರು. 'ಜಂಟ್ಲ್‌ಮೆನ್, ಮೀಟ್ ದಿ ನೆಕ್ಸ್ಟ್ ಪ್ರೈಂ ಮಿನಿಸ್ಟರ್' ಎಂದರು ಕರ್ಣಿ ಸಿಂಗ್. ಅಲ್ಲಿದ್ದವರಲ್ಲಿ ಯಾರೂ ಇದೊಂದು ತಮಾಷೆಯೆಂದು ನಗಲಿಲ್ಲ. ವಾತಾವರಣದಲ್ಲಿ ಬಿಗುವಿನ ಮೌನವಿತ್ತು. ಲೋಹಿಯಾ ನಗೆವಸ್ತುವಾಗಿದ್ದ ಕಾಲ ಹಿಂದೆ ಸರಿದಿತ್ತು. ಕಳೆದ ಐದು ವರ್ಷಗಳಲ್ಲಿ ಅವರ ವ್ಯಕ್ತಿತ್ವದ ಎತ್ತರ ನಂಬಲು ಅಚ್ಚರಿಯಾಗುವಷ್ಟು ವೇಗದಲ್ಲಿ ಬೆಳೆದಿತ್ತು.

'ತಮ್ಮ ವಿಚಿತ್ರ ಚಿತ್ರ, ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಸಿಡುಕುತನ, ಮತ್ತು ಯಾವುದನ್ನೂ ಅತಿಗೌರವದಿಂದ ಕಾಣದ ತಮ್ಮ ತೀಕ್ಷ್ಣ ನೋಟಗಳ ನಡುವೆಯೂ ಲೋಹಿಯಾ ಗೆಲ್ಲುತ್ತಿದ್ದರು. ಕಾರಣ, ಅವರು 'ಚರಿತ್ರೆಯ ಸರಿಯಾದ ಭಾಗದಲ್ಲಿ' ಇದ್ದರು; ಅಂದರೆ, ಮುಂದಿನ ತಲೆಮಾರುಗಳು ಹಿಂತಿರುಗಿ ಚರಿತ್ರೆಯನ್ನು ಅವಲೋಕಿಸಿದಾಗ, ನ್ಯಾಯ, ನೈತಿಕತೆ ಕುರಿತ ಅವರ ಚಿಂತನೆ, ನಡೆನುಡಿಗಳನ್ನು ಒಪ್ಪಿ ಮೆಚ್ಚುವಂತೆ ಇದ್ದರು. ಕಾಂಗ್ರೆಸ್ಸಿಗರ ಪೊಳ್ಳು ಶ್ರದ್ಧಾಭಕ್ತಿ ಹಾಗೂ ಸವಕಲು ಕ್ಲೀಷೆಗಳ ವಿರುದ್ಧ ದೇಶದಲ್ಲಿ ಏಳುತ್ತಿದ್ದ ಬೃಹತ್ ಅಲೆಗಳ ಮೇಲೇರಿ ಸವಾರಿ ಮಾಡುತ್ತಿದ್ದ ಅವರು ಮುಖವಾಡಗಳನ್ನು ಬಯಲಿಗೆಳೆಯುವ, ಕಿತ್ತೆಸೆಯುವ, **anti–hero** ಅಥವಾ ಪ್ರತಿನಾಯಕರಾಗಿದ್ದರು.'

ಕರ್ಣಿ ಸಿಂಗ್ ರಾಮಮನೋಹರ ಲೋಹಿಯಾರನ್ನು 'ಮುಂದಿನ ಪ್ರಧಾನಿ' ಎಂದು ಕರೆದದ್ದು ಆಕಸ್ಮಿಕವೇನಾಗಿರಲಿಲ್ಲ. ಕಾರಣ, ಲೋಹಿಯಾ ಹೆಸರು ಪ್ರಧಾನಿ ಹುದ್ದೆಗೋ, ರಾಷ್ಟ್ರಪತಿ ಹುದ್ದೆಗೋ ಕೇಳಿ ಬಂದ ಸಂದರ್ಭಗಳೂ ಇದ್ದವು. ಅಂಥದೊಂದು ಪ್ರಸಂಗದಲ್ಲಿ ಲೋಹಿಯಾ ಹೇಳಿದರು:

'ನಾನು [ಆಕಾಶವಾಣಿಯ ಮನರಂಜನಾ ವಿಭಾಗವಾದ] ವಿವಿಧಭಾರತಿ ಅಲ್ಲ. ನನಗೆ ನನ್ನದೇ ಆದ ನೀತಿತತ್ವಗಳಿವೆ. ನಾನು ಇಂಥದೊಂದು ಹುದ್ದೆಗೆ ಹೋಗಬೇಕು ಎಂದು ಯೋಚಿಸಿದಾಗ ಅಲ್ಲಿಗೆ ನನ್ನದೇ ಆದ ಷರತ್ತುಗಳೊಂದಿಗೆ ಹೊರಡುತ್ತೇನೆ.'

ಕರ್ಣಿ ಸಿಂಗ್ 1967ರಲ್ಲಿ ಹೇಳಿದ ಮಾತನ್ನು ನಾವು ಐವತ್ತು ವರ್ಷಗಳ ನಂತರ ಹಿಂತಿರುಗಿ ನೋಡಿದರೆ ಆ ನಿರೀಕ್ಷೆಯಲ್ಲಿದ್ದ ಸತ್ವ ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತದೆ:

ಸ್ವತಂತ್ರ ಭಾರತದಲ್ಲಿ ನೆಹರು, ಪಟೇಲ್ ಥರದ ಅಧಿಕಾರಸ್ಥರನ್ನು ಬಿಟ್ಟರೆ ಸಮಸ್ತ ಭಾರತವನ್ನು ಅರಿಯಲೆತ್ನಿಸಿದ್ದ, ಹಾಗೂ ತಮ್ಮದೇ ರೀತಿಯಲ್ಲಿ ಅಖಿಲ ಭಾರತೀಯ ವ್ಯಾಪ್ತಿಯ ಮನ್ನಣೆ ಪಡೆದಿದ್ದ ಧೀಮಂತ ಚಿಂತಕ–ನಾಯಕರು ಇಬ್ಬರೇ: ಬಿ.ಆರ್. ಅಂಬೇಡ್ಕರ್ ಮತ್ತು ರಾಮಮನೋಹರ ಲೋಹಿಯಾ.

ಭಾರತೀಯ ಸಮಾಜವನ್ನು ನಿಯಂತ್ರಿಸುತ್ತಿದ್ದ ಜಾತಿಪದ್ಧತಿಯ ಎಲ್ಲ ಮುಖಗಳನ್ನೂ ಅಂಬೇಡ್ಕರ್ ಮತ್ತು ಲೋಹಿಯಾ ಇಡಿಯಾಗಿ ಅರಿಯಲೆತ್ನಿಸಿದ್ದರು. ಭಾರತದ ಹಲಬಗೆಯ ಸಮಸ್ಯೆಗಳು ಹಾಗೂ ಸಮಸ್ಯೆಗಳಿಗೆ ಉತ್ತರಗಳು; ಭಾರತದ ರಾಜ್ಯಗಳು, ಪ್ರಾಂತಗಳು, ಗಡಿಗಳು, ಭಾಷೆಗಳು... ಎಲ್ಲವನ್ನೂ ಕುರಿತು ಆಳವಾಗಿ ಯೋಚಿಸಿ, ಬರೆದು, ಮಾತಾಡಿದ ಚಿಂತಕರಿವರು. ಈ ಇಬ್ಬರೂ ದೇಶದ ಜನ, ದೇಶದ ವ್ಯವಸ್ಥೆ ತಮ್ಮನ್ನು ಕೇಳಲಿ ಬಿಡಲಿ, ದೇಶದ ಸಮಸ್ತ ಮುಖಗಳನ್ನು ಕುರಿತು ಚಿಂತಿಸಿ ಉತ್ತರ ಹುಡುಕುತ್ತಿದ್ದ ಕ್ರಿಯಾಶಾಲಿ ನಾಯಕರೂ ಆಗಿದ್ದರು.

ಈ ಇಬ್ಬರೂ ಧೀಮಂತ ಚಿಂತಕ–ನಾಯಕರ ಮನಸ್ಸಿನ ಆಳದಲ್ಲಿ ಈ ದೇಶವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುವ ಕನಸು ಹಾಗೂ ತಹತಹವಿದ್ದರೆ ಅದು ತೀರ ಸಹಜವಾದುದಾಗಿತ್ತು. ಸ್ವಾತಂತ್ರ್ಯದ ನಂತರದ ಭಾರತದ ಆಡಳಿತದಲ್ಲಿ ಈ ಇಬ್ಬರಿಗೂ ಮಹತ್ವದ ಪಾತ್ರ ದೊರೆಯದೆ ಬೇಗ ನಿರ್ಗಮಿಸಿದ್ದರಿಂದ ಭಾರತಕ್ಕೇ ನಷ್ಟವಾಯಿತು ಎಂಬುದನ್ನು ಚರಿತ್ರೆ ದಾಖಲಿಸಲೇಬೇಕಾಗುತ್ತದೆ.

* * *

ಎಲ್ಲರ ಕಷ್ಟ ನೋಡಲು, ಕೇಳಿಸಿಕೊಳ್ಳಲು, ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಒಂದೆಡೆ ನಿಲ್ಲದೆ, ದೇಶದುದ್ದಕ್ಕೂ ಸುತ್ತುತ್ತಿದ್ದ ಲೋಹಿಯಾ ದೇಹ ನವೆಯುತ್ತಿತ್ತು. ಚುನಾವಣೆಯ 'ಮಾಡು ಇಲ್ಲವೆ ಮಡಿ' ಸುತ್ತಾಟದಿಂದ ದೇಹ ಹೈರಾಣಾಗಿತ್ತು. ಆದರೆ ಒಳಗಿದ್ದ ಬೆಂಕಿ ಪ್ರಜ್ವಲಿಸುತ್ತಲೇ ಇತ್ತು.

1967ರ ಸೆಪ್ಟೆಂಬರ್ ಎರಡನೆಯ ವಾರದಲ್ಲಿ ಸಮಾಜವಾದಿ ಪಕ್ಷದ ರಾಜ್ಯಸಭಾ ಸದಸ್ಯ, ಕವಿ ರಾಮ್‌ಧಾರಿ ಸಿಂಹ 'ದಿನಕರ್' ಲೋಹಿಯಾ ಜೊತೆ ಮಾತಾಡುತ್ತಾ ಹೇಳಿದರು:

'ಡಾಕ್ಟರ್ ಸಾಹೇಬ್, ನೀವೀಗ ಕೋಪವನ್ನು ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು. ದೇಶ ನಿಮ್ಮನ್ನು ಇಷ್ಟಪಡುತ್ತಿದೆ. ನೀವೀಗ ಸಣ್ಣಪುಟ್ಟ ವಿಷಯಗಳನ್ನು ಕೈಗೆತ್ತಿಕೊಂಡು ಕಹಿ ಸೃಷ್ಟಿಸಬೇಡಿ. ಈ ದೇಶ ಬಹಳ ಕ್ಲಿಷ್ಟ ದೇಶ. ದೇಶದ ಭಾರ ನಿಮ್ಮ ಹೆಗಲೇರಿದಾಗ ನಿಮ್ಮ ಈ ವ್ಯಕ್ತಿತ್ವ ನಿಮ್ಮ ಹಾದಿಯ ಮುಳ್ಳಾಗಬಾರದು.'

ಲೋಹಿಯಾ ಖಿನ್ನರಾಗಿ ಹೇಳಿದರು: 'ನಾನು ಅಷ್ಟು ದಿನ ಬದುಕುತ್ತೇನೆ ಅಂದುಕೊಂಡಿದ್ದೀಯಾ? ನನ್ನ ಆಯುಸ್ಸು ತೀರಾ ಕಡಿಮೆಯಿದೆ. ಅದಕ್ಕೇ ನಾನು ಹೇಳೋದನ್ನೆಲ್ಲ ಹೇಳಿಬಿಡುತ್ತೇನೆ, ಬಿಡು.'

ಲೋಹಿಯಾ 'ನಾನು ಹೆಚ್ಚು ದಿನ ಬದುಕುವುದಿಲ್ಲ' ಎಂದು ಲೋಕಸಭೆಯಲ್ಲೂ ಹೇಳಿದ್ದರು. ಆದ್ದರಿಂದ ಹೇಳಬೇಕಾದ್ದನ್ನೆಲ್ಲ ಹೇಳುತ್ತಲೇ ಹೋದರು. ಸ್ಪೀಕರ್ ಸ್ಥಾನದ ಘನತೆ ಬಲ್ಲ ಸ್ಪೀಕರ್‌ಗಳು ಅವರಿಗೆ ಅವಕಾಶವನ್ನೂ ಕೊಟ್ಟರು. ಅದುವರೆಗೆ ಪಾರ್ಲಿಮೆಂಟ್ ಸದಸ್ಯರಾಗಲೀ, ವಿಧಾನಸಭೆಗಳ ಶಾಸಕರಾಗಲೀ ಕಲಾಪಗಳಲ್ಲಿ ಪರಿಣಾಮಕಾರಿಯಾಗಿ ಬಳಸದೆ ಬಿಟ್ಟಿದ್ದ ಹಲವು ಸಂಸದೀಯ ಅವಕಾಶಗಳನ್ನು ಬಳಸಿ ಜಾರಿಗೆ ತಂದರು: ಪ್ರಶ್ನೆ ವೇಳೆ, ಶೂನ್ಯ ವೇಳೆ, ಗಮನ ಸೆಳೆವ ಸೂಚನೆ, ವಾಗ್ದಂಡನೆ, ಅವಿಶ್ವಾಸ ನಿಲುವಳಿ ಇವೆಲ್ಲವೂ ಲೋಹಿಯಾ ಲೋಕಸಭಾ ಪ್ರವೇಶದ ನಂತರ ಪರಿಣಾಮಕಾರಿಯಾಗಿ ಬಳಕೆಗೆ

## ಕಳೆದ ಸಂಚಿಕೆಯಲ್ಲಿ



ಲಾಲ್‌ಬಹದ್ದೂರ್ ಶಾಸ್ತ್ರಿ ಅವರ ಆಡಳಿತ ಕಾಲದಲ್ಲಿ ಪಾಕಿಸ್ತಾನದ ಗಡಿ ಕಿಡಿಗೇಡಿತನ ತೀವ್ರಗೊಂಡಿತು. 'ಭಾರತ ವಿಭಜನೆಯ ತಪ್ಪಿತಸ್ಥರು' ಪುಸ್ತಕ ರಚಿಸಿದ್ದ ಲೋಹಿಯಾ, ಆ ತಪ್ಪಿನಲ್ಲಿ ಶಾಸ್ತ್ರಿಯವರ ಪಾಲೂ ಇದ್ದುದನ್ನು ನೆನಪಿಸಿದರು. ಪಾಕಿಸ್ತಾನದ ಹಸ್ತಕ್ಷೇಪ ಹೆಚ್ಚಾಗಿ, 1965ರ ಸೆಪ್ಟೆಂಬರ್‌ನಲ್ಲಿ ಎರಡೂ ದೇಶಗಳ ನಡುವಣ ಯುದ್ಧ ಆರಂಭವಾಯಿತು. ರಾಜಕೀಯವಾಗಿ ಗಟ್ಟಿಯಾಗಿದ್ದ ಭಾರತದೆದುರು ಮಣಿಯದೆ ಪಾಕಿಸ್ತಾನಕ್ಕೆ ಬೇರೆ ದಾರಿಯಿರಲಿಲ್ಲ. ಯುದ್ಧದ ನಂತರ ಶಾಸ್ತ್ರಿ ಹೀರೊ ಆದರು. ಆದರೆ, ತಾಷ್ಕೆಂಟ್‌ನಲ್ಲಿ ಶಾಸ್ತ್ರಿ ಇದ್ದಕ್ಕಿದ್ದಂತೆ ನಿಧನರಾದರು. 1957ರಲ್ಲೇ 'ಮುಂದಿನ ಪ್ರಧಾನಿ ಇಂದಿರಾ' ಎಂದು ಹೇಳಿದ್ದ ಲೋಹಿಯಾರ ಮಾತು 1966ರಲ್ಲಿ ನಿಜವಾಯಿತು. ದೇಶದ ನಾಯಕತ್ವ ಬದಲಾದರೂ ಲೋಹಿಯಾ ಅವರ ವಿಮರ್ಶೆಯ ಪರಿಭಾಷೆ ಬದಲಾಗಲಿಕ್ಕೆ ಕಾರಣವಿರಲಿಲ್ಲ. ಸೈಕಲ್ ರಿಕ್ಷಾ ತುಳಿಯುವವರು, ದಲಿತರು, ಪೌರ ಕಾರ್ಮಿಕರು – ಲೋಹಿಯಾ ಮೂಲಕ ಸಮಾಜದ ದುರ್ಬಲ ವರ್ಗಗಳಿಗೆ ಲೋಕಸಭೆ ಧ್ವನಿಯಾಯಿತು. 1967ರ ಚುನಾವಣೆ ವೇಳೆಗೆ ಲೋಹಿಯಾ ದೇಶದ ಮಹತ್ವದ ಚಿಂತಕರಾಗಿ, ವಿರೋಧಿ ನಾಯಕರಾಗಿ ರೂಪುಗೊಂಡಿದ್ದರು.